ಪಿ.ಡಬ್ಲ್ಯೂ-3

**ದಿನಾಂಕ 28-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟಿ ಸವಾಲು 5 ನೇ ಪ್ರತಿವಾದಿಯ ಪರ ಶ್ರೀ. ಕೆ ಎಚ್ ಆರ್ ವಕೀಲರವರಿಂದಃ**

1 ನೇ ವಾದಿ ನನ್ನ ಸಂಬಂಧ ಅಲ್ಲ. 1 ನೇ ವಾದಿಯು ನನ್ನ ಸಂಬಂಧಿಯಾದ ಕಾರಣ ನಾನು ಸುಳ್ಳು ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಓದು ಬರಹ ಗೊತ್ತಿಲ್ಲ, ಆದ್ದರಿಂದ ನನಗೆ ಸರ್ವೆ ನಂಬರ ಗೊತ್ತಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ 4 ಎಕರೆ ಇರುತ್ತದೆ. ಈ ಮೊದಲು ಸದರಿ ಸರ್ವೆ ನಂಬರನಲ್ಲಿ 20 ಎಕರೆ ಇದ್ದು, ಅದು ಹೇಗೆ ಒತ್ತುವರಿಯಾಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ 4 ಆಲದ ಮರ, 10 ಗೊಬ್ಬರಿ ಮರ, 10 ಹೊಂಗೆ ಮರ, 20 ಚುಂಚಲು ಮರಗಳನ್ನು 5 ನೇ ಪ್ರತಿವಾದಿಯು ನೆಟ್ಟಿ ಬೆಳೆಸಿರುತ್ತಾರೆ ಎಂದರೆ ಸರಿಯಲ್ಲ. ಕಟ್ಟೆಯಲ್ಲಿ ನೀರು ಇವೆ. 5 ನೇ ಪ್ರತಿವಾದಿಯು ಕಟ್ಟೆಯನ್ನು ಒತ್ತುವರಿ ಮಾಡಿರುತ್ತಾರೆ. ದಾವಾ ಸ್ವತ್ತಿನಲ್ಲಿ ಬೋರನ್ನು ಕೊರೆಸಿ, ಭತ್ತದ ಬೆಳೆಯನ್ನು ಬೆಳೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. 5 ನೇ ಪ್ರತಿವಾದಿಯ ತಾಯಿಗೆ ದಾವಾ ಸ್ವತ್ತು ಇನಾಮತ್ ಮಂಜುರಾತಿ ಆಗಿರುತ್ತದೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯ ತಾಯಿಯೇ ದಾವಾ ಸ್ವತ್ತು ತನ್ನದೆಂದು ಮಾಲೀಕತ್ವ ಘೋಷಣೆಗಾಗಿ ಶ್ರೀರಂಗಪಟ್ಟಣ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದು, ನ್ಯಾಯಾಲಯವು 5 ನೇ ಪ್ರತಿವಾದಿಯ ತಾಯಿಯೇ ದಾವಾ ಸ್ವತ್ತಿನ ಮಾಲಿಕರು ಎಂದು ತೀರ್ಪನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರಿದು ನಾವು ಚಿಕ್ಕಂದಿನಿಂದಲೂ ದಾವಾ ಸ್ವತ್ತಿನಲ್ಲಿ ಕಟ್ಟೆ ಇರುತ್ತದೆ ಎಂದು ನುಡಿದರು. 5 ನೇ ಪ್ರತಿವಾದಿಯೇ ದಾವಾ ಸ್ವತ್ತಿನಲ್ಲಿ ಕೃಷಿ ಮಾಡಿಕೊಂಡು ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾವು ದಾವಾ ಸ್ವತ್ತಿನ ಆಜು ಬಾಜುದಾರಾಗಿದ್ದು, 5 ನೇ ಪ್ರತಿವಾದಿಯನ್ನು ಒಕ್ಕಲೆಬ್ಬಿಸುವ ಉದ್ದೇಶದಿಂದ ಈ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೇಬಿ ಗ್ರಾಮದಲ್ಲಿ ಸುಮಾರು 2000 ಜನರು ವಾಸವಾಗಿದ್ದು, ಯಾರು ಸಹಾ 5 ನೇ ಪ್ರತಿವಾದಿ ಕಟ್ಟೆಯ ಜಾಗವನ್ನು ಒತ್ತುವರಿ ಮಾಡಿದ್ದಾರೆ ಎಂದು ದಾವೆ ಸಲ್ಲಿಸಿರುವುದಿಲ್ಲ, ನಾವು ಅವರನ್ನು ಒಕ್ಕಲೆಬ್ಬಿಸುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನಿನ ಸರ್ವೆ ನಂಬರ 117 ಆಗಿರುತ್ತದೆ. 1 ನೇ ವಾದಿಯ ಸಂಬಂಧಿಯಾಗಿದ್ದು, ದಾವಾ ಸ್ವತ್ತಿನ ಬಗ್ಗೆ ಯಾವುದೇ ವಿಷಯ ಗೊತ್ತಿಲ್ಲದೇ ಇದ್ದರೂ ಸಹಾ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಪಹಣಿ

ಪತ್ರಿಕೆಗಳ ದಾಖಲೆಗಳನ್ನು ಪರಿಶೀಲಿಸದೇ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

ಸಿ/ಸಿ 2ನೇ ಅಪರ ಸಿವಿಲ್ ಜೆಡ್ಜ್ ಮತ್ತು
ಜೆ.ಎಂ.ಎಫ್ ಸಿ ಪಾಂಡವಪುರ

ನನ್ನನ್ನು ನ್ಯಾಯಾಲಯಕ್ಕೆ ವಾದಿಯು ಕರೆದುಕೊಂಡು ಬಂದಿರುತ್ತಾರೆ. 1 ನೇ ವಾದಿಯ ಅಣ್ಣನಾದ ಕೆಂಚಯ್ಯನಿಗೆ ನನ್ನ ಸಹೋದರಿಯನ್ನು ಕೊಟ್ಟು ವಿವಾಹ ಮಾಡಿರುತ್ತೇವೆ ಎಂದರೆ ಸರಿ. ಈ ದಾವೆಯನ್ನು ವಾದಿಯರು ಸರ್ವೆ ನಂಬರ 175 ಕ್ಕೆ ಸಂಬಂಧಪಟ್ಟಂತೆ ಸಲ್ಲಿಸಿರುತ್ತಾರೆ. ದಾವಾ ಸ್ವತ್ತಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ನಮ್ಮ ಗ್ರಾಮದಲ್ಲಿ ಎಷ್ಟು ಜನ ವಾಸವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಕಟ್ಟೆ ಇರುವ ಬಗ್ಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ.

2. ದಾವಾ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ದಾಸಯ್ಯನವರ ಜಮೀನು, ಪಶ್ಚಿಮಕ್ಕೆ ಸ್ವಾಮಪ್ಪನವರ ಜಮೀನು, ಉತ್ತರಕ್ಕೆ ಸಿದ್ದಪ್ಪನವರ ಜಮೀನು ಹಾಗೂ ದಕ್ಷಿಣಕ್ಕೆ ಸಾವಿತ್ರಮ್ಮನವರ ಜಮೀನು ಇರುತ್ತದೆ. ನಾನು ದಾವಾ ಸ್ವತ್ತಿಗೆ ಸಂಬಂಧಪಟ್ಟ ಪಹಣಿ ಪತ್ರವನ್ನು ನೋಡಿರುವುದಿಲ್ಲ. ದಾವಾ ಸ್ವತ್ತಿನಿಂದ ಸುಮಾರು 1 ಕಿ ಮೀ ದೂರದಲ್ಲಿ ನಮ್ಮ ಜಮೀನು ಇರುತ್ತದೆ. ಕಟ್ಟೆಯಲ್ಲಿ ಈಗ ನೀರು ಇದೆ. ಈಗ ದಾವಾ ಸ್ವತ್ತಿನಲ್ಲಿ 5 ನೇ ಪ್ರತಿವಾದಿ ಕೃಷಿ ಮಾಡುತ್ತಿದ್ದಾರೆ ಎಂದರೆ ಇಲ್ಲ. ದಾವಾ ಸ್ವತ್ತಿನಲ್ಲಿ 5 ನೇ ಪ್ರತಿವಾದಿ ಕೃಷಿ ಮಾಡಿ ಭತ್ತವನ್ನು ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ 5 ನೇ ಪ್ರತಿವಾದಿ ಕೊಳವೆ ಬಾವಿಯನ್ನು ಕೊರೆಸಿ ಕೃಪಿ} ಮಾಡತ್ತಿದ್ದಾರೆ, ಯಾವುದೇ ರೀತಿಯ ಕಟ್ಟೆ ಇರುವುದಿಲ್ಲ ಹಾಗೂ ನೀರು ಸಹಾ ಇರುವುದಿಲ್ಲ ಎಂದರೆ ಸರಿಯಲ್ಲ.

3. ದಾವಾ ಸರ್ವೆ ನಂಬರ 5 ನೇ ಪ್ರತಿವಾದಿಯ ತಾಯಿಯ ಹೆಸರಿಗೆ ಇನಾಮತಿ ಮೂಲಕ ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ. ಮಂಜೂರೂ ಆದಾಗಿನಿಂದಲೂ 5 ನೇ ಪ್ರತಿವಾದಿಯೇ ದಾವಾ ಸ್ವತ್ತಿನಲ್ಲಿ ಕೃಷಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯ ತಾಯಿಯೇ ದಾವಾ ಸ್ವತ್ತು ತನ್ನದೆಂದು ಮಾಲೀಕತ್ವ ಘೋಷಣೆಗಾಗಿ ಶ್ರೀರಂಗಪಟ್ಟಣ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದು, ನ್ಯಾಯಾಲಯವು 5 ನೇ ಪ್ರತಿವಾದಿಯ ತಾಯಿಯೇ ದಾವಾ ಸ್ವತ್ತಿನ ಮಾಲಿಕರು ಎಂದು ತೀರ್ಪನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ನನಗೆ ಏನು ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯವರೊಂದಿಗೆ ಸೇರಿಕೊಂಡು 5 ನೆ

ಪ್ರತಿವಾದಿಯನ್ನು ದಾವಾ ಸ್ವತ್ತಿನಿಂದ ಒಕ್ಕಲೆಬ್ಬಿಸುವ ಉದ್ದೇಶದಿಂದ ಈ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

ಅಪರ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್ ಸಿ ಪಾಂಡವಪುರ